ಅನುಬಂಧ - 2

ಬೀದರ್ ಜಿಲ್ಲೆಯಲ್ಲಿರುವ ತಾಲ್ಲೂಕುವಾರು ವಿವಿಧ ಪಶುಚಿಕಿತ್ಸಾ ಸಂಸ್ಥೆಗಳ ವಿವರ

ಕ್ರಮ ಸಂಖ್ಯೆ	ತಾಲ್ಲೂಕು	ಪಶು ವೈದ್ಯ ಶಾಲೆ	ಪಶು ಚಿಕಿತ್ಸಾ ಲಯ	ಪ್ರಾಥ ಮಿಕ ಪಶು ಚಿಕಿತ್ಸಾ ಲಯ ಕೇಂದ್ರ	ಮೂಲ ಗ್ರಾಮೀಣ ಅಭಿವೃದ್ಧಿ ಯೋಜನೆ ಕೃತಕ ಗರ್ಭಧಾರಣೆ		ಕೃತಕ ಗರ್ಭ ಧಾರಣಾ ಮುಖ್ಯ ಕೇಂದ್ರ	ಸಂಚಾರಿ ಪಶು ಚಿಕಿತ್ಸಾ ಲಯ	ಒಟ್ಟು
					ಮುಖ್ಯ ಕೇಂದ್ರ	ಉಪ ಕೇಂದ್ರ			
1	2	3	4	5	6	7	8	9	10
1)	ಬೀದರ್	1	-	3	1	6	-	1	12
2)	ಬಾಲ್ಕಿ	1	2	6	-	-	-	-	9
3)	ಹುಮ್ನಾಬಾದ್	1	5	1	1	5	1	1	15
4)	ಬಸವಕಲ್ಯಾಣ	1	2	4	-	-	-	1	8
5)	ಔರಾದ್	1	2	4	-	-	1	1	9
		5	11	18	2	11	2	4	53

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಹುಬ್ಬಳ್ಳಿ ನಗರದಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ ಮಾಡುವ ಬಗ್ಗೆ

2249 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೇ?

ಅ) ಹುಬ್ಬಳ್ಳಿ ನಗರದಲ್ಲಿ ಮಿನಿ ವಿಧಾನ ಸೌಧದ ನಿರ್ಮಾಣ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?

ಆ) ಇಲ್ಲದಿದ್ದರೆ ಇದಕ್ಕೆ ಕಾರಣಗಳೇನು?

ಇ) ಹುಬ್ಬಳ್ಳಿಯ ತಾಲ್ಲೂಕು ಕಛೇರಿ ಕಟ್ಟಡ ಬಹಳ ಚಿಕ್ಕದಾಗಿದ್ದು ಸ್ಥಳದ ಅಭಾವದಿಂದ ಸರ್ಕಾರಿ ಕಛೇರಿಗಳು ಬೇರೆ ಕಡೆ ಕಾರ್ಯನಿರ್ವಹಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ. ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಳ್ಳುವ ಕ್ರಮವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಹೌದು. ತಾಲ್ಲೂಕು ಕಛೇರಿಯಲ್ಲಿ ಸ್ಥಳದ ಅಭಾವವಿರುವುದರಿಂದ ಸರ್ಕಾರಿ ಕಛೇರಿಗಳು ಬೇರೆ ಕಡೆ ಕಾರ್ಯ ನಿರ್ವಹಿಸುತ್ತಿವೆ.

ಈ) ಈ ಬಗ್ಗೆ ಸಂಬಂಧಿಸಿದ ಜಿಲ್ಲಾಧಿಕಾರಿಯವರ ವರದಿ ತರಿಸಿ ಪರಿಶೀಲಿಸಲಾಗುವುದು.